VIJAYA KARNATAKA, March 17, 2014, Page No. 02

# ಖಾಸಗಿಯಿಂದ ಪಡಿತರ ಸೋರಿಕೆ: ಆತಂಕ

**ವಿಕ ಸುದ್ದಿಲೋಕ** ಬೆಂಗಳೂರು

ಪಡಿತರ ವಿತರಣೆಯನ್ನು ಖಾಸಗಿಯವರಿಗೆ ನೀಡದೆ ಸಂಪೂರ್ಣ ಆಯಾ ರಾಜ್ಯ ಸರಕಾರಗಳೇ ವಹಿಸಿಕೊಂಡಾಗ ಮಾತ್ರ ಸೋರಿಕೆ ತಡೆಯಲು ಸಾಧ್ಯ ಎಂದು ಭಾರತೀಯ ಸಾಮಾಜಿಕ ಭದ್ರತಾ ಸಂಘದ ನಿವೃತ್ತ ಪ್ರಧಾನ ಕಾರ್ಯದರ್ಶಿ ಆರ್ ಕೆ ಎ ಸುಬ್ರಹ್ಮಣ್ಯ ಸಲಹೆ ನೀಡಿದರು.

ಭಾರತೀಯ ಸಾಮಾಜಿಕ ಭದ್ರತಾ ಸಂಘ ಬೆಂಗಳೂರಿನಲ್ಲಿ ಆಯೋಜಿಸಿದ್ದ 'ಸಾಮಾಜಿಕ ರಕ್ಷಣೆ ಮತ್ತು ಆಹಾರ ಭದ್ರತೆ' ಕುರಿತ ದುಂಡು ಮೇಜಿನ ಸಭೆಯಲ್ಲಿ ಶುಕ್ರವಾರ ಅವರು ಮಾತನಾಡಿದರು.

"ಪಡಿತರ ವಿತರಣೆಯನ್ನು ಖಾಸಗಿಯವರ ಕೈಗೊಪ್ಪಿಸಿರುವುದರಿಂದ ವಿತರಕರು, ಮಾರಾಟಗಾರರು, ಸಾಗಾಟಗಾರರು ಹೀಗೆ ನಾನಾ ಹಂತಗಳ ಮೂಲಕ ಶೇ.57ರಷ್ಟು ಸೋರಿಕೆಯಾಗುತ್ತಿದೆ. ಕೇಂದ್ರ ಸರಕಾರ ಕಳೆದ ತಿಂಗಳು ನೇಮಿಸಿರುವ 'ಪಡಿತರ ಮೌಲ್ಯಮಾಪಕರ ತಂಡ'ದ ವರದಿಯಿಂದ ಈ ಅಂಶ ಬೆಳಕಿಗೆ ಬಂದಿದೆ. ಆದ್ದರಿಂದ ಪಡಿತರ ವಿತರಣೆ ವ್ಯವಸ್ಥೆ (ಟಿಪಿಡಿಎಸ್)ಯನ್ನು ಸರಕಾರಗಳೇ ವಹಿಸಿಕೊಳ್ಳಲಿ. ತಮಿಳುನಾಡು, ಕೇರಳ ಮತ್ತು ಛತ್ತೀಸ್‌ಗಢ ರಾಜ್ಯಗಳಲ್ಲಿ ಪಡಿತರ ವಿತರಣೆಯನ್ನು ಖಾಸಗಿಯವರಿಗೆ ನೀಡದೆ ಸಹಕಾರಿ ಸಂಘಗಳು ಮತ್ತು ಸರಕಾರಿ ಮಳಿಗೆಗಳ ಮೂಲಕವೇ ವಿತರಿಸಲಾಗುತ್ತಿದೆ. ಧಾನ್ಯಗಳ ಸರಬರಾಜಿಗೂ ಸರಕಾರಿ ಸಾರಿಗೆಯನ್ನೇ ಬಳಸಲಾಗುತ್ತಿದೆ. ಹೀಗಾಗಿ ಅಲ್ಲಿ ಸೋರಿಕೆ ಪ್ರಮಾಣವಿಲ್ಲದೆ ಯೋಜನೆ ಯಶಸ್ವಿಯಾಗಿದೆ. ಅಂತಹ ವ್ಯವಸ್ಥೆಯನ್ನು ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲೂ ಜಾರಿಗೆ ತರಬೇಕು," ಎಂದರು.

ದುಂಡುಮೇಜಿನ ಸಭೆಯಲ್ಲಿ 'ರಾಷ್ಟ್ರೀಯ ಆಹಾರ ಭದ್ರತೆ ಹಕ್ಕು' ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. 1997ರ 'ಪಡಿತರ ವಿತರಣಾ ವ್ಯವಸ್ಥೆ' (ಪಿಡಿಎಸ್), ನಂತರದಲ್ಲಿ ಜಾರಿಗೆ ತಂದ 'ಉದ್ದೇಶಿತ ಪಡಿತರ ವಿತರಣಾ ವ್ಯವಸ್ಥೆ'(ಟಿಪಿಡಿಎಸ್)ಯಲ್ಲಿನ ನ್ಯೂನತೆಗಳ ಬಗ್ಗೆ ಚರ್ಚಿಸಲಾಯಿತು. ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗಳ ವಿತರಣೆಯಲ್ಲಿನ ಗೊಂದಲ ಹಾಗೂ ಸಮಸ್ಯೆಗಳು. ಅವುಗಳ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳು? ಪಡಿತರ ವಿತರಣೆಗೆ ಅನುಸರಿಸುತ್ತಿರುವ ಪ್ರಸ್ತುತ ಪದ್ಧತಿ ಹಾಗೂ ಇದರಲ್ಲಿ ತರಬೇಕಾದ ಬದಲಾವಣೆಗಳ ಬಗ್ಗೆ ದಿನವಿಡೀ ಚರ್ಚಿಸಲಾಯಿತು. ಚರ್ಚೆಯಲ್ಲಿ ವ್ಯಕ್ತವಾದ ಸಲಹೆಗಳ ಪಟ್ಟಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸುವುದಾಗಿ ಆಯೋಜಕರು ತಿಳಿಸಿದರು.

ಸಮಾರಂಭದಲ್ಲಿ ಭಾರತೀಯ ಸಾಮಾಜಿಕ ಭದ್ರತಾ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎನ್. ಸೋಮ್, ಸಂಘದ ಬೆಂಗಳೂರು ಶಾಖೆಯ ಉಪಾಧ್ಯಕ್ಷ ಜಿ. ರಮಾನಂದ್, ಜರ್ಮನಿಯ ಎಫ್‌ಇಎಸ್‌ನ ಹಿರಿಯ ಯೋಜನಾ ಸಲಹೆಗಾರ ಡಾ. ಪ್ರವೀಣ್ ಸಿನ್ಹಾ, ರಾಜ್ಯ ನಿವೃತ್ತ ಐಎಎಸ್ ಅಧಿಕಾರಿ ಬಿ.ಕೆ. ಭಟ್ಟಾಚಾರ್ಯ, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಅಧಿಕಾರಿಗಳು ಹಾಗೂ ಹಿರಿಯ ತಜ್ಞರು ಪಾಲ್ಗೊಂಡಿದ್ದರು.